**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.950/2019**

ಪಿ.ಡಬ್ಲ್ಯೂಃ 5

ಸಿ.ಡಬ್ಲ್ಯೂಃ 6

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮಹಮ್ಮದ್ ಇಬ್ರಾಹಿಂ |
| ತಂದೆ ಹೆಸರು | ಃ | ಹಮೀದ್ ರಾವುತರ್ |
| ವಯಸ್ಸು | ಃ | **54 ವರ್ಷ** |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಹಲಸೂರು ಗ್ರಾಮ |

**ದಿನಾಂಕ: 08-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಈಗ್ಗೆ ಸುಮಾರು 6-7 ವರ್ಷಗಳ ಹಿಂದೆ ನಾನು ಹಲಸೂರಿನ ಕೆರೆಕೋಡಿ ಹತ್ತಿರ ನಾನು ಹೋಗುತ್ತಿರುವಾಗ ಪೊಲೀಸರು ನನ್ನನ್ನು ಕರೆದು ಮಹಜರ್ ಮಾಡುತ್ತಿದ್ದು, ಅದಕ್ಕೆ ಸಹಿ ಮಾಡಲು ಕೋರಿದ್ದು, ನಾನು ಸದರಿ ದಾಖಲಾತಿಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಯಾವುದೇ ಘಟನೆಯನ್ನು ನನ್ನ ಕಣ್ಣಾರೆ ಕಂಡಿರುವುದಿಲ್ಲ, ನನಗೆ ಯಾವುದೇ ವಿಚಾರ ತಿಳಿದಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ, ಮಹಜರ್ ಆಗಿದ್ದು, ಸದರಿ ದಾಖಲಾತಿಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕಃ 14-03-2017 ರಂದು ಸಂಜೆ 4-00 ರಿಂದ 5-00 ಗಂಟೆ ಸಮಯದಲ್ಲಿ ಲಕ್ಕವಳ್ಳಿ ಹೋಬಳಿಯ ಮಂಡರವಳ್ಳಿಯ ಸರ್ವೆ ನಂ.42/3 ರ ಜಮೀನಿನಲ್ಲಿರುವ ಶೋಭರವರಿಗೆ ಸಂಬಂಧ ಪಟ್ಟ ಮನೆ ಇದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ಮನೆಯಲ್ಲಿ ಅಕ್ರಮವಾಗಿ ತಲಾ 25 ಕೆಜಿಯ 70 ಅಕ್ಕಿ ತುಂಬಿರುವ ಚೀಲಗಳನ್ನು ಹಾಗೂ ಒಂದು ಪ್ಲಾಸ್ಟಿಕ್ ಚೀಲದಲ್ಲಿ 4 ಕೆಜಿಯ

ತೊಗರಿ ಬೇಳೆಯನ್ನು ದಾಸ್ತಾನು ಮಾಡಿಕೊಂಡಿದ್ದರ ವಿಚಾರವಾಗಿ ಪೊಲೀಸರು ಮಹಜರ್ ಮಾಡಿದ್ದು, ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆಂದರೆ ಸರಿ. ನಿಮ್ಮ ಮುಂದೆ 25 ಕೆಜಿಯ 70 ಅಕ್ಕಿ ತುಂಬಿದ ಚೀಲಗಳನ್ನು, 4 ಕೆಜೆ ತೊಗರಿಬೇಳೆಯನ್ನು ಹಾಗೂ ತೂಕ ಮಾಡುವ ಯಂತ್ರವನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಮಗೆ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.</u>**

ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿರುವುದಿಲ್ಲ.

**<u>ಮರುವಿಚಾರಣೆ</u>ಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**